ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-4 Issue 3, Nov-Dec, 2022, Pp. 28-32.
©*IIMRD*, Mysuru.

IIMRD JOURNALS
www.iimrd.com

# ಶರಣ ಹರಳಯ್ಯನವರ ಕಾಯಕ ನಿಷ್ಠೆ

**ಗುರುನಾಥ ವಿಠಲ***

*ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಾಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.

***ಸಾರಾಂಶ: (Abstract)***

*ನಾವು ಈ ವೈಜ್ಞಾನಿಕ ಯುಗದಲ್ಲಿ ಸಾಧಿಸಲು ಆಗದೆ ಇರುವುದನ್ನು ಶರಣರು ಸುಮಾರು 12ನೇ ಶತಮಾನದಲ್ಲಿ ಸಾಧಿಸಿದ್ದರು. ಶರಣರಿಗಿಂತ ಹಿಂದಿನ ಕನ್ನಡ ಕವಿಗಳು 'ಮಾನವ ಕುಲ ಒಂದೇ" ಎಂದು ಸಾರಿ ಹೇಳಿದರು. ಅದನ್ನು ಆಚರಣೆಗೆ ತಂದ ಶ್ರೇಯಸ್ಸು ಶರಣರಿಗೆ ಸಲ್ಲುತ್ತದೆ. ಮನುಷ್ಯರೆಲ್ಲ ಜಾತಿಯತೆಯಿಂದ ಹೊರಬರುವುದು ಸಾಧ್ಯವಾಗಿರಲಿಲ್ಲ. ಆದರೆ ಶರಣರು ಆ ಕೆಲಸ ಮಾಡಿದರು. ಶರಣರಲ್ಲಿಯೇ ಮಹಾ ಶರಣನಾದ ಸಮಗಾರ ಕುಲದಲ್ಲಿ ಜನಿಸಿದ, ಶಿವಶರಣ ಹರಳಯ್ಯನ ಕಾಯಕ ನಿಷ್ಠೆಯು ಯಾವ ರೀತಿಯದು ಎಂಬುದನ್ನು ಪ್ರಸ್ತುತ ಲೇಖನದಲ್ಲಿ ವಿವರಿಸಲಾಗಿದೆ.*

***ಮುಖ್ಯಪದಗಳು: (Keywords)*** *ಶಿವಶರಣರು, ಹರಳಯ್ಯ, ಕಾಯಕ ನಿಷ್ಠೆ, ವಚನಗಳು.*

**ಪೀಠಿಕೆ**

ಶರಣ ಹರಳಯ್ಯ ಅವರ ಧರ್ಮಪತ್ನಿ ಕಲ್ಯಾಣಮ್ಮ ಇಬ್ಬರೂ ನಿತ್ಯ ಮಡಿಯಿಂದ ಪೂಜೆ ಪುನಸ್ಕಾರ ಮುಗಿಸಿಕೊಂಡು ಕಾಯಕದಲ್ಲಿ ತೊಡಗಿಸಿಕೊಂಡವರು. ಡೋಹರ ಕಲ್ಲಯ್ಯನವರ ಮನೆಯಿಂದ ಹರಳಯ್ಯನವರ ತಂದೆ ಮಾದೇವಯ್ಯನವರು ಹದಮಾಡಿದ ಚರ್ಮ ತರುತ್ತಿದ್ದರು. ಹರಳಯ್ಯನ ಹೆಂಡತಿ ಕಲ್ಯಾಣಮ್ಮನವರು ಚಪ್ಪಲಿ ತಯಾರಿಸಲು ಆ ಚರ್ಮವನ್ನು ಕೊಡತಿಯಿಂದ ಕುಟ್ಟಿ–ಕುಟ್ಟಿ ಒಂದು ಹದಕ್ಕೆ ತಂದು ಕಲ್ಯಾಣಮ್ಮ ಮಾವನಿಗೆ ಕೊಡುತ್ತಿದ್ದಳು. ಮಾವನಾಗಲೀ ಗಂಡನಾಗಲೀ ಕುಟ್ಟಿ ಕುಟ್ಟಿ ಹದ ಮಾಡಿದ ಚರ್ಮವನ್ನು ತಮಗೆ ಬೇಕಾದ ಪಾದದ ಅಳತೆಗೆ ಕತ್ತರಿಸಿ ಕೊಡುತ್ತಿದ್ದರು. ಒಂದರ ಮೇಲೊಂದು ಅಟ್ಟೆಯನ್ನು ಜೋಡಿಸಿ ಹೊಲಿಯುವ ಕೆಲಸ ಕಲ್ಯಾಣಮ್ಮ ಮಾಡುತ್ತಿದ್ದಳು. ಅದಕ್ಕೆ ಹಿಮ್ಮಡಿ ಜೋಡಿಸುವ ಕೆಲಸ ಮಾತ್ರ ಹರಳಯ್ಯ ತಾನೇ ಮಾಡುತ್ತಿದ್ದ ಹಿಮ್ಮಡಿಯ ಚಪಲಿ ಹೆಚ್ಚು ಕಡಿಮೆಯಾದರೆ ಚಪಲಿ ತೊಡುವವರಿಗೆ ನಡೆಯುವಾಗ ತೂಕ ತಪ್ಪಿದಂತಾಗುತ್ತದೆ. ಹಾಗೆ ನಡೆಯುತ್ತ ಹೋದರೆ ಚಪ್ಪಲಿ ತೊಟ್ಟವರ ಮೀನು ಖಂಡಗಳಲ್ಲಿ ತೊಡೆಗಳಲ್ಲಿ ನೋವು ಕಾಣಿಸಿಕೊಳ್ಳುತ್ತದೆ ಎಂದು ಹರಳಯ್ಯನ ತರ್ಕವಾಗಿತ್ತು. ಮಕ್ಕಳ ಕಾಲಿನ ಸೊಟ್ಟುತನವನ್ನು ಪರೀಕ್ಷಿಸಿ ಹರಳಯ್ಯನು ಅವುಗಳಿಗೆ ತಕ್ಕಂತೆ ಹಿಮ್ಮಡಿ ಎಡಕ್ಕೂ ಬಲಕ್ಕೂ ಅಥವಾ ಹಿಂಬದಿಯಲ್ಲೋ ಎತ್ತರವಾಗುವಂತೆ ಅಟ್ಟೆಗಳನ್ನು ಜೋಡಿಸುತ್ತಿದ್ದ ಅಥವಾ ತೆಳುವಾದ ಅಟ್ಟೆಗಳನ್ನು ಇಡುತ್ತಿದ್ದ.

*Please cite this article as: ಗುರುನಾಥ ವಿಠಲ.* (2022). ಶರಣ ಹರಳಯ್ಯನವರ ಕಾಯಕ ನಿಷ್ಠೆ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 4(3). ಪು.ಸಂ. 28–32.*

"ಹರಳಯ್ಯ ಮತ್ತು ಕಲ್ಯಾಣಮ್ಮ ಸೇರಿ ತಯ್ಯಾರಿಸುತ್ತಿದ್ದ ಚಪಲಿಗಳನ್ನು ಎಷ್ಟು ಹೋಗಳಿದ್ದರು. ಸಾಲದು, ಮೆಟ್ಟಿನ ಮುಂಭಾಗ ಗಿಳಿಯ ಮೂತಿಯಂತೆ ಚಾಚಿಕೊಂಡಿದ್ದು, ಅದಕ್ಕೆ ಅವರು ಸುಂದರವಾದ ತಿರುವು ಕೊಡುತ್ತಿದ್ದರು. ಬಿಂಕದಿಂದ ನವಿಲು ತನ್ನ ಮೂತಿಯನ್ನು ತಿರುವುಕೊಂಡಂತೆ ಮೂತಿಗಳು ಕಾಣುತ್ತಿದ್ದವು. ಮೇಲೊಂದು ಗುಚ್ಚ ಹೊಲಿದು ಕಲ್ಯಾಣಮ್ಮ ಅವುಗಳ ಮರೆಗು ಹೆಚ್ಚಿಸುತ್ತಿದ್ದಳು. ಪಾದದ ಮುಂಬಾಗ ಮುಚ್ಚುವ ಮೆಟ್ಟಿನ ಅಂಚಿನಲ್ಲಿ ಬಣ್ಣ ಬಣ್ಣದ ಕಸೂತಿಯನ್ನು ಜೋಡಿಸುತ್ತಿದ್ದಳು. ಅವುಗಳನ್ನು ನೋಡಿದರೆ ಸಾಕು ಎಂಥವರ ಮನಸ್ಸಾದರೂ ಸೊರೆಗೊಳ್ಳುತ್ತಿತ್ತು. ಅವರು ತಯ್ಯಾರಿಸುತ್ತಿದ್ದ ಮೆಟ್ಟುಗಳ ಇನ್ನೊಂದು ವೈಶಿಷ್ಠವೆಂದರೆ ಗಿರಕಿ ಮೆಟ್ಟಗಳು ಅಟ್ಟೆಗಳಿಗೆ ಒಣಕೊಬ್ಬರಿಯನ್ನು ತಿಕ್ಕಿ ತಿಕ್ಕಿ ಹದವಾಗಿ ಅಟ್ಟೆಗಳು ಹೀರಿಕೊಳ್ಳುವಂತೆ ಮಾಡುತ್ತಿದ್ದರು. ಇದರಿಂದ ಚಪ್ಪಲಿಗಳು ಮಿರಿ ಮಿರಿ ಮಿಂಚುತ್ತಿದ್ದವು. ಅದಕ್ಕಾಗಿ ಅವುಗಳಿಗೆ ಗಿರಕಿ ಮೆಟ್ಟಗಳೆಂದು ಕರೆಯುತ್ತಿದ್ದರು. ಹರಳಯ್ಯನ ಕಲೆಗಾರಿಕೆಯು ತಮ್ಮ ಊರಲ್ಲಿಯಷ್ಟೆಯಲ್ಲ, ಪರ ಊರುಗಳಲ್ಲಿಯೂ ಖ್ಯಾತಿ ಪಡೆಯಿತು. ಹರಳಯ್ಯನು ತಯ್ಯಾರಿಸಿದ ಮೆಟ್ಟುಗಳನ್ನು ತೊಡುವುದರಿಂದ ವರ್ಷೋಪತ್ತಿನಲ್ಲಿ ಸೊಟ್ಟ ಕಾಲಿನ ಮಕ್ಕಳು ಎಳೆಕಾಲುಗಳು ಸರಿಯಾಗುತ್ತಿದ್ದವು. ಮಗನ ಬುದ್ದಿವಂತಿಕೆಯನ್ನು ಕಂಡು ಮಾದೇವಯ್ಯ ಮತ್ತು ಮಾದೇವಮ್ಮರು ಹಿರಿಹಿರಿ ಹಿಗುತ್ತಿದ್ದರು. "ತಮ್ಮ ಗ್ರಾಮದ ಜನ ಅಲ್ಲದೇ ಬೇರೆ ಊರಿನ ಜನರು ಮಾದೇವಯ್ಯನ ಮನೆಗೆ ಮೆಟ್ಟಿಗಾಗಿ ಬರಹತ್ತಿದ್ದರು. ಅಂತವರಿಗೆ ಹರಳಯ್ಯ ನಮ್ರತೆಯಿಂದ ಅಯ್ಯನವರೇ, ನಿಮ್ಮ ಊರಿನಲ್ಲಿ ಸಮಗಾರರನ್ನು ಬಿಟ್ಟು ನಮ್ಮಲಿಗೆ ಬಂದರೆ, ಅವರ ಹೊಟ್ಟೆಯ ಮೇಲೆ ಹೊಡೆಯಬೇಕೆ" ಇದು ಪರಮಾತ್ಮ ಮೆಚ್ಚುವ ಕೆಲಸವೇ ದಯವಿಟ್ಟು ಕ್ಷಮಿಸಿ ತಾವು ನಿಮ್ಮ ಊರಿನ ಸಮಗಾರರಲ್ಲಿಯೇ ಹೋಗಿ ಎಂದು ಹೇಳುತ್ತಿದ್ದ." ಹರಳಯ್ಯನ ಇಂಥ ಮಾತುಗಳಿಗೆ ಜನರು ತೆಲೆದೂಗುತ್ತಿದ್ದರು. ಅವನ ವಿಶಾಲವಾದ ಮನಸ್ಸನ್ನು ವಿಚಾರ ಸರಣಿಯನ್ನು ಮೆಚ್ಚುತ್ತಿದ್ದರು. ಮಕ್ಕಳಿಗಾಗಿ ತಾನು ತಯ್ಯಾರಿಸುತ್ತಿದ್ದ ವಿಶೇಷವಾದ ಮೆಟ್ಟುಗಳನ್ನು ತಯ್ಯಾರಿಸುವುದು ಹೇಗೆ ಎಂಬುದನ್ನು ಆತ ತನ್ನ ವೃತ್ತಿ ಭಾಂದವರಿಗೆ ಕಲಿಸಿಕೊಡುತ್ತಿದ್ದ. ಹೀಗೆ ತಾನೂ ಬದುಕಬೇಕು, ತನ್ನಂತೆ ಪರರೂ ಬದುಕಬೇಕು ಎಂಬುದನ್ನು ಹರಳಯ್ಯನ ಜೀವನದ ನಿಲುವಾಗಿತ್ತು.

ಪ್ರತಿಯೊಬ್ಬರ ಜೀವನದಲ್ಲಿ ಒಂದಲ್ಲಾ ಒಂದು ದಿನ ಒಳ್ಳೆಯ ಕಾಲ ಕೂಡಿ ಬರುತ್ತದೆ ಎಂಬುದು ಸುಳ್ಳಲ್ಲ. ಏಕೆಂದರೆ ಕೆಳ ಜಾತಿಯಲ್ಲಿ ಜನಿಸಿದ ಶಿವಶರಣ ಹರಳಯ್ಯ, ತನ್ನ ನಡೆ ನುಡಿಯಿಂದ ಬ್ರಹ್ಮಾಂಡವನ್ನೆ ನಡುಗಿಸುವಂತ ಒಬ್ಬ ಶರಣನ ಮನದಲ್ಲಿ ಮನೆ ಮಾಡಿಕೊಂಡಿದ್ದಾನೆ ಎಂದರೆ ಅದು ಸಾಧಾರಣ ಮಾತಲ್ಲ. ಆತ ತನ್ನ ಕಾಯಕದಿಂದಲೇ ಬಸವಣ್ಣನವರಿಗೆ ದಿಗಿಲು ಎಬ್ಬಿಸುವಂತೆ ಮಾಡಿದ ಅದರ ಸ್ವಾರಸ್ಯ ಈ ಕೆಳಗಿನಂತೆ ಪ್ರಸ್ತಾಪಿಸಿದೆ.

**ಶರಣು ಶರಣಾರ್ಥಿ**

ಬಸವಣ್ಣನವರು ಬಹು ದಿನಗಳಿಂದ ಹರಳಯ್ಯನವರನ್ನು ಕಾಣದೆ ಬಹಳ ಚಿಂತೆಗೊಳಗಾಗಿದ್ದರು. ಆಗ ಹರಳಯ್ಯ ನವರು ಶಿವ ಧ್ಯಾನ್ಯ, ಸಮಾಜ ಚಿಂತನೆ ವಚನ ನಿರ್ಮಾಣದಲ್ಲಿ ತೊಡಗಿದ್ದರು. ಹೀಗಾಗಿ ಹರಳಯ್ಯನವರಿಗೆ ಬಸವಣ್ಣನವರ ದರ್ಶನ ಪಡೆಯುವುದು ಸ್ವಲ್ಪ ಕಡಿಮೆಯಾಯಿತು. ಹೀಗಾಗಿ ಕಣ್ಣರಿಯದಿದ್ದರೂ ಕರುಳು ಅರಿಯದೇ ಎಂಬಂತೆ ಬಸವಣ್ಣನವರ ಮನಸ್ಸು ತಾಳದೆ ಇದ್ದ ಕಾರಣ ಅಣ್ಣ ಬಸವಣ್ಣನವರು ಅಂದು ಬೆಳಿಗ್ಗೆ ಹರಳಯ್ಯನವರ ಮನೆಗೆ ಬರುತ್ತಿದ್ದರು. ಇದನ್ನು ಕಂಡು ಓಣಿಯ

ಜನರೆಲ್ಲರೂ ಎದ್ದುಕೊಂಡು ಅತಿ ಭಯ ಭಕ್ತಿಯಿಂದ ಜಯಕಾರಗಳೊಂದಿಗೆ ಬರಮಾಡಿಕೊಂಡು ಬರುತ್ತಿದರು. ಇದನ್ನು ಸಂಗಯ್ಯ ಎಂಬುವನು ಹರಳಯ್ಯನಿಗೆ ಬಂದು ಹೇಳಿದ, ಆಗ ಹರಳಯ್ಯ ಕಕ್ಕಾಬಿಕ್ಕಿಯಾಗಿ ಅವರಿಗೆ ಸ್ವಾಗಿತಿಸುವುದು ಹೇಗೆ? ಏನು? ಮಾಡಬೇಕೆಂದು ಒದ್ದಾಡತೊಡಗಿದ. ಅಷ್ಟರಲ್ಲಿ ಬಸವಣ್ಣ ಮನೆಗೆ ಬಂದೆ ಬಿಟ್ಟ, ಆಗ ಸತಿಪತಿಗಳು ಓಡಿ ಹೋಗಿ ಅವರ ಕಾಲಿಗೆ ಬಿದ್ದು ದರ್ಶನ ಪಡೆದು ಮನೆಗೆ ಕರೆದು ಚಾಪೆ ಮೇಲೆ ಕೂಡಿಸಿದರು. ಹರಳಯ್ಯ ಮೂಕನಾಗಿ ನಿಂತ. ಇದನ್ನು ಕಂಡ ಬಸವಣ್ಣ ಯಾಕೆ ಹರಳಯ್ಯ ತಂದೆಯವರೆ ಮೌನವಾಗಿರುವಿರಿ? ಏನು ಹೇಳಲಿ ತಂದೆ ತಾವು ಈ ರೀತಿ ಹೇಳದೆ ಕೇಳದೆ ಬಂದಿರಿ ಉಪಚಾರ ಸನ್ಮಾನ ಹೇಗೆ ಎಂದು ತಿಳಿಯದಂತಾಗಿದೆ ಎಂದ. ಹರಳಯ್ಯನವರೆ ತಂದೆ ಮಗನಿಗೆ, ಮಗ ತಂದೆಗೆ ಯಾವತ್ತಾದರೂ ತಮ್ಮ ಮನೆಗೆ ತಾವೇ ಬಂದರೆ ಅವರಿಗೆ ಸತ್ಕಾರ ಸನ್ಮಾನದ ಉಪಚಾರ ಮಾಡುವರುಂಟೆ? ನಾನಾರು? ಈ ಮನೆ ಯಾರದು? ಇದು ನನ್ನ ಮನೆಯಲ್ಲವೆ? ಹೌದು ತಂದೆ ಇದೆಲ್ಲ ನಿನ್ನದೇ ನನ್ನದೆಂಬುದು ಯಾವುದೂ ಇಲ್ಲ. ಹಾಗಾದರೆ ನನ್ನದನ್ನು ನನಗೆ ಕೊಟ್ಟು ಸತ್ಕಾರ ಸನ್ಮಾನ ಮಾಡುವಿರಾ? ಎಂದಾಗ ಹರಳಯ್ಯನವರ ಮನದಲ್ಲಿಯ ತಳಮಳವೆಲ್ಲ ಮಯಾವಾಯಿತು. ಕಲ್ಯಾಣಿ ಅಪ್ಪನವರಿಗೆ ಜೋಳದ ಅಂಬಲಿಯನ್ನು ಮಾಡು ಎಂದು ಹೇಳಿದ. ಹರಳಯ್ಯ ತಂದೆಯವರೆ ಬಹುದಿನಗಳಿಂದ ನಿಮ್ಮ ದರ್ಶನವಾಗಿರಲಿಲ್ಲ. ಅದಕ್ಕಾಗಿ ನನ್ನ ಮನದಲ್ಲಿ ನಿಮ್ಮದೆ ಧ್ಯಾನ ಎಂದರು. ಅಪ್ಪನವರೆ ನನಗೆ ಸಮಯವೆ ಸಿಗದಂತಾಗಿ ತಮ್ಮಲ್ಲಿ ಬುರುವುದು ಆಗಲಿಲ್ಲ ಕ್ಷಮಿಸಬೇಕು ಎಂದು ಹರಳಯ್ಯ, ಕಲ್ಯಾಣಮ್ಮ ಜೋಳದ ಅಂಬಲಿ ತಂದು ಕೊಟ್ಟಳು. ಕುಡಿದು ಸಂತೃಪತ್ತರಾದ ಬಸವಣ್ಣನವರು ಹಾಗಾದರೆ ವಚನ ಸಾಹಿತ್ಯ ಕಾರ್ಯ ಭರದಿಂದ ಸಾಗಿದೆಯಂತಾಯಿತು ಎಂದು ಹೇಳಿದರು. ಹೌದು ತಂದೆ ಎಲ್ಲಾ ತಮ್ಮ ಆರ್ಶಿವಾದದ ಫಲವೆ ಎಂದು ಹೀಗೆ ಕೆಲವು ಮಾತುಗಳು ಆಡಿ ಬಸವಣ್ಣನವರು ಹೊರಡಲು ಸಿದ್ಧರಾದರು ಆಗ ಹರಳಯ್ಯ ಹೋಗು ಬನ್ನಿ ಬಸವ ತಂದೆ, ಶರಣಾರ್ಥಿ ಎಂದು ಭಕ್ತಿ ಪೂರ್ವಕವಾಗಿ ನಮಸ್ಕರಿಸಿದ. ಇದಕ್ಕೆ ಪ್ರತಿಯಾಗಿ ಬಸವಣ್ಣನವರು **"ಶರಣು ಶರಣಾರ್ಥಿ ಶಿವಶರಣ ಹರಳಯ್ಯನವರೆ!** ನಾನಿನ್ನು ಬರುವೆನೆಂದು ಹೇಳಿ ಕುದುರೆ ಏರೆ ಹೋದರು. ಹಿಂದಿನಿಂದ ಹರಳಯ್ಯನವರು ಚಿಂತಾಕ್ರಾಂತನಾಗಿ ಕುಳಿತರು ಆಗ ಕಲ್ಯಾಣಮ್ಮ ಬಂದು ನೋಡಿ ಸ್ವಾಮಿ ಪ್ರತಿಯೊಂದು ಸಮಸ್ಯೆಗಳಿಗೆ ಒಂದಿಲ್ಲ ಒಂದು ಪರಿಹಾರ ಇದ್ದೆ ಇರುತ್ತದೆ. ತಮಗಾವ ಆಧ್ಯಾತ್ಮಿಕ ಚಿಂತೆ ಕಾಡುತ್ತಿದೆ ಹೇಳಿ, ನೋಡು ಕಲ್ಯಾಣಿ ಬಸವಣ್ಣನವರು ನಮ್ಮ ಮನೆಗೆ ಬಂದು ಸುಖ ದುಃಖವನ್ನೆಲ್ಲ ಕೇಳಿದಲ್ಲದೆ ವಚನಗಳ ಬಗ್ಗೆ ಧರ್ಮಕಾರ್ಯಗಳ ಬಗ್ಗೆ ಮಾತನಾಡಿ ಅಂಬಲಿ ಕುಡಿದು ಹೋಗುವಾಗ ನಾನು ಬಂದು "ಶರಣಾರ್ಥಿ ಎಂದರೆ ಅವರು ಶರಣು ಶರಣಾರ್ಥಿ ಶಿವಶರಣ ಹರಳಯ್ಯ ಎಂದು ನಮಸ್ಕರಿಸಿದರು. ಒಂದು ಶರಣು ಭಾರವನ್ನು ನನ್ನ ಮೇಲೆ ಹೊರಿಸಿ ಹೋದರು. ನಮ್ಮಲ್ಲರ ಪೂಜ್ಯರಾದ ಅವರು ಬರೀ ನಮಸ್ಕಾರ ಹೇಳಬೇಕಾಗುತ್ತಲ್ಲವೆ?

ಇದು ನನಗೆ ಹೊರಲಾರದ ಭಾರವಾಗಿದೆ.ಅವರು ಹೊರಿಸಿದ ಭಾರವನ್ನು ನಾನು ಹೇಗೆ ಇಳಿಸಲೆಂಬ ಚಿಂತೆ ನನ್ನನ್ನು ಕಾಡುತ್ತಿದೆ ಎಂದು ನುಡಿದರು. ಅಲ್ಲ ಸ್ವಾಮಿ ತಾವು ಆ ಕ್ಷಣದಲ್ಲೇ ಅವರ ಪಾದವನ್ನಾದರೂ ಹಿಡಿದು ಕ್ಷಮಯಾಚಿಸಬಹುದಿತ್ತಲ್ಲವೆ? ಹೌದು ಕಲ್ಯಾಣಿ ನೀನು ಹೇಳುವುದು ನಿಜ. ಎಂಥಾ ಮುಗ್ದ ನಾನು. ಆ ವಾಣಿ ಕೇಳಿದ ತಕ್ಷಣ ಶಿಲೆಯ ಕಂಬದಂತೆ ಜಡನಾಗಿಬಿಟ್ಟೆ. ಪುಂಗಿಯ ನಾದಕ್ಕೆ ಮನಸೋತು

ಹಾವಿನಂತಾದೆ. ಛೇ ಎಂಥಹ ತಪ್ಪು ಮಾಡಿದೆನಲ್ಲ ಕಲ್ಯಾಣಿ, ಮುಂದಿನ ಮಾರ್ಗ ನನಗೆ ತೋಚುತ್ತಿಲ್ಲ ನೀನೆ ಹೇಳು.

ಕಲ್ಯಾಣಮ್ಮನವರು ಕೆಲವು ಕ್ಷಣಗಳವರೆಗೆ ಮೌನವಾಗಿ ಯೋಚಿಸ ತೊಡಗಿದರು. ನೋಡಿ ನಮ್ಮ ಮೇಲೆ ಹೊರಿಸಿದ ಭಾರವನ್ನಳಿಸಲು ನಮ್ಮ ಮೈ ತೊಡೆದು ಚರ್ಮವನ್ನು ಸುಲಿದು ಅಪ್ಪನವರಿಗೆ ಸುಂದರವಾದ ಜೋಡುಗಳು ಮಾಡಿ ಅರ್ಪಿಸೋಣವೆಂದು ನುಡಿದಳು. ಅಬ್ಬಾ...... ಎಂಥಾ ಮಾತು ಹೇಳಿದೆ ಕಲ್ಯಾಣಿ! ನಾನು ಧನ್ಯನಾದೆ, ಹಾಗಾದರೆ "ನನ್ನ ಬಲದೊಡೆ ಚರ್ಮ ನಿನ್ನ ಎಡೆದೊಡೆ ಚರ್ಮ ಸುಲಿದು ಜೋಡು ಮಾಡೋಣವೆ?" ಆಗಲಿ ಸ್ವಾಮಿ ಹಾಗಾದರೆ ನಾಳೆ ಬೆಳಿಗ್ಗೆ ನಾವು ಕೆಲಸ ಮಾಡೋಣ ಎಂದು ಶಿವಶರಣ ಹರಳಯ್ಯ ಐಕ್ಯ ಸ್ಥಳದಿಂದ ಮಹಾಲಿಂಗ ಚಿತ್ ಶಕ್ತಿಗಳು, ಸಮರಸ ಭಕ್ತಿ, ಮಹೇಶ್ವರನಿಂದ ಆತ್ಮ ಶಕ್ತಿಯನ್ನು ಪಡೆದವರಾಗಿದ್ದರು. ಈ ಪ್ರಯೋಗ ಮಾಡುವ ಪ್ರಸಂಗ ಅನಿವಾರ್ಯವಾಗಿ ಬಂದೊದಗಿತ್ತು.

ಮರುದಿನ ನಸುಕಿನ ಮುಂಜಾವದಲ್ಲೆದ್ದು, ಸ್ನಾನ ಮಾಡಿ ಮಡಿಯಿಂದ ಪೂಜೆ ಮಾಡಿ ಅಣಿ ಮಾಡಿಕೊಂಡು ಶಿವ ಕೊಟ್ಟ ರೆಂಪಿಗೆಯನ್ನು ಹಿಡಿದು ಶಿವಧ್ಯಾನ್ಯದಲ್ಲಿ ಮಗ್ನರಾದರು. ಇವರ ಈ ನಿರ್ಧಾರವನ್ನು ಶಿವ ಸಹಿಸದೆ ನನ್ನ ಪುತ್ರ ಎಂತಹ ಕಠಿಣ ತರವಾದ ನಿರ್ಧಾರ ಬೇಡವೆಂದು ಸಾಕ್ಷಾತ್ ಶಿವ ಬಂದು ಹೇಳಿದರು ಕೇಳದೆ ಹರಳಯ್ಯ ಇಲ್ಲ ತಂದೆ ಒಮ್ಮೆ ಕೈಗೊಂಡ ನಿರ್ಧಾರ ಬದಲಿಸುವುದಿಲ್ಲ ಎಂದು ನುಡಿದ ಶಿವ ನಿರಾಶನಾಗಿ ಕಣ್ಮರೆಯಾಗಿ ಹೋದ ಮತ್ತು ರೆಂಪ್ಪಿಗೆ ಹಿಡಿದು ತೊಡೆ ಚರ್ಮ ಸುಲಿಯ ತೊಡಗಿದ ಹರಳಯ್ಯ ಕಿಂಚಿತ್ತಾದರೂ ನೋವೆಂಬ ಮಾತಿಲ್ಲ. ರಕ್ತವೆಂಬುದಲ್ಲಿ ಹೆಪ್ಪು ಗಟ್ಟಿತ್ತು. ಹನಿ ರಕ್ತ ಬರಲಿಲ್ಲ. ಹೀಗೆ ಇಬ್ಬರು ತೊಡೆಯ ಚರ್ಮ ಸುಲಿದು ಹದ ಮಾಡಿ ಅದೇ ಧ್ಯಾನ್ಯದಲ್ಲಿ ಮಡಿಯಿಂದ ಉಪವಾಸ ಭಕ್ತಿಪೂರ್ವಕವಾಗಿ ಪಾದರಕ್ಷೆಗಳು ಸಿದ್ಧಪಡಿಸಿದರು. ಮಗ ಶೀಲವಂತನೊಡಗೊಡಿ ಮುತ್ತುಗಳಿಂದ ಹೆಣದು ರೇಷ್ಮೆ ದಾರದಿಂದ ನೇಯ್ದರು ಅಂಥ ಚಮ್ಮಾವುಗಳು ಭೂ ಲೋಕದಲ್ಲಿ ಅಷ್ಟೇ ಅಲ್ಲದೆ ದೇವ ಲೋಕದಲ್ಲಿ ಕೂಡ ಕಂಡಯರಿದಂತಿದ್ದವು. ಮರುದಿನ ಬೆಳಿಗ್ಗೆ ಸ್ನಾನ ಮಾಡಿ ಮಡಿಯಿಂದಲೆ ಪೂಜೆ ಮಾಡಿ. ಚಪ್ಪಲಿಳನ್ನು ತಲೆಯ ಮೇಲಿಟ್ಟು ಕೊಂಡು ಬಸವನ ಮಹಾ ಮನೆಗೆ ಹೊರಟರು. ಇವರು ಬರುವುದನ್ನು ಬಸವಣ್ಣನವರು ನೋಡಿ ಸ್ವಾಗತ ಮಾಡಿದರು. ಗಂಗಾಬಿಕೆ, ನೀಲಾಂಬಿಕೆಯರು ಅವರಿಗೆ ಸತ್ಕಾರದ ವ್ಯವಸ್ಥೆ ನಡೆಸಿದರು. ಬಸವ ತಂದೆಯವರೆ ತಾವು ನಮ್ಮ ಮನೆಗೆ ಬಂದಾಗ ನನ್ನಂಥ ಸಾಮಾನ್ಯನು ಬಂದು ಶರಣೆಂದರೆ, ನೀವು ಪ್ರತಿಯಾಗಿ ಶರಣ ಶರಣಾರ್ಥಿ ಎಂದು ಎರಡು ಸಲ ಹೇಳಿದಿಲೆಲ್ಲಾ. ಆ ಹೊರೆಯನ್ನು ಇಳಿಸಿಕೊಳ್ಳಲು ಇಲ್ಲಿಗೆ ಬಂದಿರುವೆ ಎಂದು ರೇಷ್ಮೆ ಬಟ್ಟೆ ಸರಿಸಿ ಬಸವನ ಕೈಗೆ ಜೋಡುಗಳನ್ನು ಕೊಟ್ಟು ಇವುಗಳು ಮೆಟ್ಟಿ ನಮ್ಮ ಪಾಪದ ಹೊರೆಯನ್ನು ಇಳಿಸಬೇಕೆಂದು ಬೇಡಿಕೊಂಡರು.

ಅವುಗಳನ್ನು ನೋಡುತ್ತಿದಂತೆಯೇ ಬಸವಣ್ಣನವರಿಗೆ ದಿಗ್ಭ್ರಮೆಯಾಯಿತು. ಹರಳಯ್ಯನವರೆ ಬಹಳ ಸುಂದರವಾಗಿದೆ. ಇಷ್ಟೊಂದು ಸೂಕ್ಷವಾಗಿರುವ ಚರ್ಮವು ಎಷ್ಟೊಂದು ಹೊಳಪು ತುಂಬಿದೆಯಲ್ಲ ಇದಾವ ಪ್ರಾಣಿಯದೆಂದು ಕೇಳಿದರು. ಆಗ ಹರಳಯ್ಯ ತೊದಲುತ್ತಾ! ತಂದೆ ಇದರಲ್ಲಿ ನನ್ನ ಬಲತೊಡೆಯ ಕಲ್ಯಾಣಿಯ ಎಡತೊಡೆಯ ಚರ್ಮವನ್ನು ಸೇರಿಸಿ ಮಾಡಿದ್ದೇನೆ. ಪ್ರಭು, ಎಂದ ಕೂಡಲೇ

ಆಶ್ಚರ್ಯಚಕಿತರಾಗಿ ಶಿವಾ..... ಶಿವಾ..... ಎಂದು ಆ ಪಾದರಕ್ಷೆಗಳು ತೆಲೆಯ ಮೇಲೆ ಇಟ್ಟುಕೊಂಡರು. ಗಂಗಾ ನೀಲಾ ಬೇಗ ಬನ್ನಿ ಎಂದು ಕೂಗಿದರು. ಅವರು ಧಾವಿಸಿ ಓಡಿ ಬಂದು ನೋಡಿ ಅವರು ಸಹ ಧಿಗಿಲ್‌ಗೊಂಡರು. ಆಗ ಬಸವಣ್ಣನವರು ಪಾದರಕ್ಷೆ ಹಿಡಿದು ಹಾಡತೊಡಗಿದ್ದರು. ಇದನೆಲ್ಲ ಆಲಿಸುತ್ತಿದ್ದ ಹರಳಯ್ಯ ದಿಗ್ಭ್ರಾಂತರಾಗಿ ಮಾತನಾಡದೆ ಮೂಕರಾಗಿ ಬಿಟ್ಟರು. ಆಗ ಗಂಗಾಬಿಕೆ, ಹರಳಯ್ಯ ಸಾಕ್ಷಾತ ಶಿವನ ಸ್ವರೂಪವೆಂದು ಆತನ ಪಾದ ತೊಳೆದು ಪೂಜೆ ಮಾಡಿರಿ ಎಂದು ಬಸವಣ್ಣನವರು ಹೇಳಿದರು. ಹಾಗೆ ಬಸವಣ್ಣನವರ ತೆಲೆಯ ಮೇಲೆ ಪಾದರಕ್ಷೆಗಳು ಇದ್ದವು ಕೆಳಗೆ ಇಡಲೆಯಿಲ್ಲ. ಇವುಗಳಿಂದ ನಾನು ಸಾಕ್ಷಾತ ಸಂಗಮನ ದರ್ಶನ ಪಡೆದಿದ್ದೇನೆಂದು ನನ್ನ ಜನ್ಮ ಸಾರ್ಥಕವಾಯಿತು.

ಹರಳಯ್ಯನವರೆ ಇಂಥಾ ಚಪ್ಪಲಿಗಳು ನಮ್ಮಂಥ ನರಮಾನವರು ಮೆಟ್ಟುವಂತಿಲ್ಲ. ಒಂದು ವೇಳೆ ಯಾರಾದರು ಈ ಪಾದರಕ್ಷೆ ಧರಿಸಿದರೆ ಸುಟ್ಟು ಭಸ್ಮವಾಗುವರು ತಾಪದಿಂದ ನರಳಿ ನರಳಿ ಸಾಯುವರು. ಇವು ಭೂಲೋಕ ಪಾತಾಳ ಲೋಕ ಸ್ವರ್ಗಲೋಕಗಳಿಗೆ ಸಮಬಾರವಾದ ಚಮ್ಮಾವುಗೆಗಳೆಂದು ನುಡಿದರು. ಗಂಗಾಬಿಕೆ ನೀಲಾಂಬಿಕೆ ಹರಳಯ್ಯ ತಂದೆಯವರೆ ಶಿವ ಸ್ವರೂಪಿಗಳಾದ ತಮನ್ನು ಕಳುಹಿಸಲು ನಮಗೆ ಮನಸ್ಸು ಒಪುತ್ತಿಲ್ಲ. ತಾವು ಒಂದು ದಿನವಾದರೂ ನಮ್ಮ ಮನೆಯಲ್ಲಿ ಇರುವಿರಾ? ಆಗ ಹರಳಯ್ಯನಿಗೆ ಮಾತುಗಳೇ ಬರುತ್ತಿರಲಿಲ್ಲ. ಹರಳಯ್ಯ ಬೇಡ ತಾಯಿ ನಿಮ್ಮಿಂದ ನಮಗೆ ಬಹಳ ಉಪಕಾರವಾಗಿದೆ ಎಂದು ತೆಲೆಬಾಗಿ ನಿಂತು ಕಣ್ಣಿರು ಸುರಿಸಿದ. ಆಗ ಬಸವಣ್ಣನವರು ಹರಳಯ್ಯ ತಂದೆಯವರೆ ತಾವು ನೊಂದಕೊಳ್ಳದಿರಿ. ಎಲ್ಲವೂ ಆ ಶಿವನಿಚ್ಛೆ ನಾವು ಅವನಾಡಿಸಿದಂತೆ ಆಡುವೆವು ತಾವು ನಿಶ್ಚಿಂತೆಯಿಂದ ಈ ಪಾದರಕ್ಷೆಗಳು ತೆಗೆದುಕೊಂಡು ಹೋಗಿ ಮನೆಯಲ್ಲಿಟ್ಟು ಪೂಜಿಸಿರಿ. ಇವು ಕೂಡಲ ಸಂಗಮನಿಗೆ ಅರ್ಪಿತವಾಗುವದೆಂದು ಹೇಳಿ ಸಮಧಾನ ಪಡಿಸಿ, ಮನಗೆ ಕಳಿಸಿಕೊಟ್ಟರು. ಈ ರೀತಿಯಾಗಿ ಹರಳಯ್ಯನವರ ಕಾಯಕದ ಮಹಿಮೆಯನ್ನ ಕಂಡಕೊಳ್ಳಬಹುದು.

**ಪರಮರ್ಶನ ಗ್ರಂಥಗಳು**


- ಚಂದ್ರಕಾಂತ ಹರಸೂರ (2008). ಶಿವಶರಣ ಹರಳಯ್ಯ. ಶಿವಶರಣ ಹರಳಯ್ಯನವರ ಪೀಠ ಹಾಗೂ ವಿಶ್ವ ಪ್ರಚಾರ ಸಮಿತಿ, ಕಲಬುರಗಿ.
- ಜಯಶ್ರೀ ದಂಡೆ. (2012). ಶರಣ ಸ್ಮಾರಕಗಳು. ವಿರಣ್ಣ ದಂಡೆ ಕನ್ನಡ ಅಧ್ಯಾಯನ ಸಂಸ್ಥೆ, ಪ್ರಸರಾಂಗ, ಕಲಬುರಗಿ.
- ಜಿವಿ ಜಯ ರಾಜಶೇಖರ. (2020). ಶೂನ್ಯ ಸಂಪಾದನೆಯ ಶರಣರು. ಬಸವಧರ್ಮ ಪ್ರಚಾರ ಸಂಸ್ಥೆ, ಹಿರೇಮಠ ಸಂಸ್ಥಾನ, ಬೀದರ.
- ಬಾಲಚಂದ್ರ ಜೈಶೆಟ್ಟಿ. (2008). ಹರಳಯ್ಯ. ಸಿದ್ದಲಿಂಗೇಶ್ವರ ಪ್ರಕಾಶನ, ಕಲಬುರಗಿ.